ಕೆಲಸ-ಕಾರ್ಯಗಳನ್ನು ಕೈಗೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತೇನೆ ಹಾಗೂ ಕೆರೆಯನ್ನು ಇನ್ಸ್‌ಪೆಕ್ಷನ್ ಮಾಡಬೇಕೆಂದು ಕೇಳಿರುವುದರಿಂದ ನಾನು ಸಿ.ಇ. ಅವರನ್ನು ಕಳುಹಿಸಿ ಇನ್ಸ್‌ಪೆಕ್ಷನ್ ಮಾಡಿಕೊಂಡು ಬರಲು ತಿಳಿಸುತ್ತೇನೆ ಮತ್ತು ನಾನು ಯಾವಾಗಲಾದರೊಮ್ಮೆ ಸ್ಥಳಕ್ಕೆ ಭೇಟಿ ಕೊಟ್ಟು ನೋಡಿಕೊಂಡು ಬರುವುದಾಗಿ ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಬೀದರ್ ಜಿಲ್ಲೆಯಲ್ಲಿ ಕಾರಂಜಾ ಯೋಜನೆ

23 (49)

ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ): ಮಾನ್ಯ ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ ಕಾರಂಜಾ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಯಿತು?

ಆ) ಯೋಜನೆ ಪ್ರಾರಂಭವಾದಾಗಿನಿಂದ ಇಲ್ಲಿಯವರೆವಿಗೆ ಪ್ರತಿ ವರ್ಷ ಖರ್ಚು ಮಾಡಿರುವ ಹಣವೆಷ್ಟು?

ಇ) ಈ ಯೋಜನೆ ಪೂರ್ಣವಾಗಲು ಅಗತ್ಯವಿರುವ ಅವಧಿಯೆಷ್ಟು?

ಈ) ಈ ಯೋಜನೆಯನ್ನು ನಿಗದಿತ ಅವಧಿಯಲ್ಲಿ ಮುಗಿಸಲು ಸರ್ಕಾರ ಯೋಜನೆಗಳನ್ನೇನಾದರೂ ಹಾಕಿಕೊಂಡಿದೆಯೆ? ಹಾಕಿಕೊಂಡಿದ್ದಲ್ಲಿ ಆ ಯೋಜನೆಗಳ ವಿವರಗಳೇನು?

ಉ) ಯೋಜನೆ ಪೂರ್ಣಗೊಂಡಾಗ ಜಿಲ್ಲೆಯ ಯಾವ ಯಾವ ಭಾಗದಲ್ಲಿರುವ ಎಷ್ಟು ಎಕರೆ ಜಮೀನಿಗೆ ನೀರಾವರಿ ಸೌಲಭ್ಯ ದೊರಕುವುದು?

ಶ್ರೀ ಹೆಚ್.ಕೆ.ಪಾಟೀಲ್ (ಬೃಹತ್ ನೀರಾವರಿ ಸಚಿವರು):

ಅ) 1969-70ರಲ್ಲಿ ಪ್ರಾರಂಭಿಸಲಾಯಿತು. Started during 1969-70

ಆ) ವಿವರಗಳು ಈ ಕೆಳಕಂಡಂತೆ ಇವೆ.

ಕ್ರ.ಸಂ	ವರ್ಷ	ವೆಚ್ಚ (ರೂ.ಲಕ್ಷಗಳಲ್ಲಿ)
1	1969-70	0.11
2	1970-71	4.23
3	1971-72	13.34
4	1972-73	18.77
5	1973-74	35.35
6	1974-75	63.57
7	1975-76	74.96
8	1976-77	117.56
9	1977-78	156.16
10	1978-79	126.60
11	1979-80	293.29
12	1980-81	264.93
13	1987-82	271.35
14	1982-83	345.22
15	1983-84	338-53
16	1984-85	475.64
17	1985-86	203.36
18	1986-87	988.65
19	1987-88	573.55

20	1988-89	711.48
21	1989-90	836.31
22	1990-91	843.88
23	1991-92	1011.12
24	1992-93	1546.28
25	1993-94	1495.76
26	1994-95	1528.74
27	1995-96	1811.07
28	1996-97	1746.89
29	1997-98	2118.28
30	1998-99	3049.17
31	1999-2000	2512.79

(ಜನವರಿ 2000 ವರೆಗೆ)

ಇ) 2 ವರ್ಷಗಳು.

ಈ) ಈ ಯೋಜನೆಯನ್ನು ನಿಗದಿತ ಕಾಲಮಿತಿಯಲ್ಲಿ ಪೂರ್ಣಗೊಳಿಸಲು ಸರ್ಕಾರ ವಿವರವಾದ ಯೋಜನೆಯನ್ನು ಹಾಕಿಕೊಂಡಿದೆ.

1. ಈ ಯೋಜನೆಗೆ ಸಂಬಂಧಿಸಿದಂತೆ ಅಣೆಕಟ್ಟಿನ ಕೆಲಸ ಈಗ ಪೂರ್ಣಗೊಂಡಿದ್ದು ಉದ್ದೇಶಿತ ನೀರಾವರಿ ಸಾಮರ್ಥ್ಯ ಸೃಷ್ಟಿಸಿದ ನಂತರ ಅಣೆಕಟ್ಟಿನ ಕೆಲಸ ಪೂರ್ಣಗೊಳಿಸಲಾಗುವುದು.

2. ಕಾರಂಜಾ ಏತ ನೀರಾವರಿ ಯೋಜನೆಗೆ ಬೇಕಾದ ವಿದ್ಯುತ್ ಸಂಪರ್ಕಕ್ಕಾಗಿ ಇದೇ ಫೆಬ್ರುವರಿ 20 ರಂದು ಎಲ್ಲಾ ಅಗತ್ಯ ಠೇವಣಿಯನ್ನು ನೀಡಲಾಗಿದ್ದು ಈ ತಿಂಗಳ ಅಂತ್ಯದಲಿ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದು. ಇಲ್ಲಿ 0 ರಿಂದ 5 ಕಿ.ಮೀ.ವರೆಗೆ

ಮುಂದಿನ ನೀರಾವರಿ ವರ್ಷದಲ್ಲಿ ನೀರು ಒದಗಿಸಲಾಗುವುದು, 6 ರಿಂದ 20 ಕಿ.ಮೀ.ವರೆಗೆ ಮೇ-ಜೂನ್ 2000ದ ವೇಳೆಗೆ ನೀರು ಬಿಡಲಾಗುವುದು ಉಳಿದ 21 ರಿಂದ 24 ಕಿ.ಮೀ.ವರೆಗೆ 2001ನೇ ಮಾರ್ಚ್ ಅಂತ್ಯದ ವೇಳೆಗೆ ನೀರು ಬಿಡಲಾಗುವುದು.

3. ಬಲದಂಡೆ ಕಾಲುವೆಯಲ್ಲಿ 0-90 ಕಿ.ಮೀ.ವರೆಗೆ ಕಾಮಗಾರಿ ಭರದಿಂದ ನಡೆದಿದ್ದು ರೈಲ್ವೆಸೇತುವೆ ಹೊರತು ಪಡಿಸಿ ಕಾಲುವೆಯ ಕೆಲಸ ಇದೇ ಮಾರ್ಚ್ ಅಂತ್ಯದ ವೇಳೆಗೆ ಪೂರ್ಣಗೊಳಿಸಲಾಗುವುದು.

4. ಉಳಿದ 91 ರಿಂದ 131 ಕಿ.ಮೀ.ವರೆಗೆ ಕಾಲುವೆ ಕಾಮಗಾರಿಗಳನ್ನು 2001 ಮಾರ್ಚ್ ಅಂತ್ಯದ ವೇಳೆಗೆ ಪೂರ್ಣಗೊಳಿಸಲಾಗುವುದು.

5. ಕಾರಂಜಾ ಎಡದಂಡೆ ಕಾಲುವೆ ಪೂರ್ಣ ಉದ್ದ 0 ರಿಂದ 31 ಕಿ.ಮೀ.ವರೆಗೆ ಕಾಮಗಾರಿಗಳನ್ನು ಇದೇ ಮಾರ್ಚ್ ಅಂತ್ಯದ ವೇಳೆಗೆ ಪೂರ್ಣಗೊಳಿಸಲಾಗುವುದು ಹಾಗೂ ಮುಂದಿನ ನೀರಾವರಿ ವರ್ಷದ ಜೂನ್ ತಿಂಗಳಿನಲ್ಲಿ ನೀರಾವರಿ ಸೌಲಭ್ಯ ಒದಗಿಸಲಾಗುವುದು.

6. ಕಾಮಗಾರಿಗೆ ಅಗತ್ಯವಾದ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳುವ ಕೆಲಸ ಏಪ್ರಿಲ್ ಅಂತ್ಯದಲ್ಲಿ ಪೂರ್ಣಗೊಳ್ಳಲಿದೆ.

7. ಎಲ್ಲಾ ಪುನರ್ವಸತಿ ಕೇಂದ್ರಗಳ ಕಾಮಗಾರಿಗಳನ್ನು ಪೂರ್ಣಗೊಳಿಸಿ ಜಿಲ್ಲಾ ಪಂಚಾಯತ್‌ಗೆ ಏಪ್ರಿಲ್ ಅಂತ್ಯದ ವೇಳೆಗೆ ಹಸ್ತಾಂತರಿಸಲಾಗುವುದು.

ಊ) ಬಾಲ್ಕಿ 58000 ಎಕರೆಗಳು

ಬೀದರ್ 30000 ಎಕರೆಗಳು

ಶ್ರೀ ಪ್ರಕಾಶ್ ಖಂಡ್ರೆ: ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವಂಥ ಪ್ರಶ್ನೆಗೆ ಸಂಬಂಧಿಸಿದಂತೆ ಮಾನ್ಯ ಸಚಿವರು ನೀಡಿರುವ ಉತ್ತರ ತುಂಬಾ ಹಿಡಿಸಿದೆ. ಉತ್ತರದಲ್ಲಿ ಬೀದರ್ ಜಿಲ್ಲೆಯಲ್ಲಿ ಕಾರಂಜಾ ಯೋಜನೆಯನ್ನು ಪೂರ್ತಿಗೊಳಿಸಲು ಎರಡು ವರ್ಷಗಳ ಅವಧಿ ತೆಗೆದುಕೊಳ್ಳಲಾಗುವುದೆಂದು ತಿಳಿಸಿದ್ದಾರೆ. ಈ ಕುರಿತು ಯೋಜನೆಯನ್ನು ಪೂರ್ತಿಗೊಳಿಸಲು ಇನ್ನು ಎಷ್ಟು ಹಣ ಬೇಕಾಗುತ್ತದೆಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ.ರಾಮದಾಸ್: 1969-70ರಲ್ಲಿ ಕಾರಂಜಾ ಯೋಜನೆ ಪ್ರಾರಂಭವಾಯಿತು. ಹಾಗೆ ಪ್ರಾರಂಭವಾದಂಥ ಸಂದರ್ಭದಲ್ಲಿ ಈ ಯೋಜನೆಗೆ ನಿಗದಿಪಡಿಸಿದ್ದ ಹಣವೆಷ್ಟು? ಇವ್ವೊತ್ತು ಖರ್ಚಾಗಿರುವುದೆಷ್ಟು? ಯೋಜನೆ ಪೂರ್ತಿಗೊಳಿಸಬೇಕಾದರೆ ಇನ್ನು ಎಷ್ಟು ಹಣ ಬೇಕಾಗುತ್ತದೆ? ಸದರಿ ಯೋಜನೆಯ ಕಾರ್ಯ ನಿಗದಿತ ಅವಧಿಯಲ್ಲಿ ಪೂರ್ತಿಯಾಗದೆ ಕುಂಠಿತಗೊಳ್ಳಲು ಪ್ರಮುಖವಾದ ಕಾರಣಗಳೇನು? ಎಂಬುದನ್ನು ಮಾನ್ಯ ಸಚಿವರು ದಯಮಾಡಿ ಹೇಳಬೇಕು.

ಶ್ರೀ ಹೆಚ್.ಕೆ.ಪಾಟೀಲ್: ಸನ್ಮಾನ್ಯ ಅಧ್ಯಕ್ಷರೆ, ಗೋದಾವರಿ ಬೇಸಿನ್‌ನಲ್ಲಿ ಪ್ರಮುಖವಾಗಿ ಕೈಗೆತ್ತಿಕೊಂಡಿರುವುದು ಕಾರಂಜಾ ಯೋಜನೆಯಾಗಿದ್ದು, ಈ ಯೋಜನೆಗೆ ನಾವು ಈಗಾಗಲೇ ಸುಮಾರು 240 ಕೋಟಿ ರೂಪಾಯಿಗಳಷ್ಟು ಹಣವನ್ನು ಖರ್ಚು ಮಾಡಿದ್ದೇವೆ. ಇದನ್ನು ಪೂರ್ಣಗೊಳಿಸಬೇಕಾದರೆ ಇನ್ನೂ 95 ಕೋಟಿ ರೂಪಾಯಿಗಳಷ್ಟು ಹಣದ ಅವಶ್ಯಕತೆಯಿದೆ. ಯೋಜನೆಯನ್ನು ಪೂರ್ತಿಗೊಳಿಸುವುದಕ್ಕೆ ಇವ್ವೊತ್ತು ರಿವೈಸ್ಡ್ ಎಸ್ಟಿಮೇಟ್ ಇರುವುದು 340 ಕೋಟಿ ರೂಪಾಯಿಗಳು ಮತ್ತು ಇದನ್ನು ಪೂರ್ತಿಗೊಳಿಸಲು ಇನ್ನು ಎರಡು ವರ್ಷಗಳು ತಗಲುತ್ತದೆಂಬುದು ನಮ್ಮ ಅನಿಸಿಕೆಯಾಗಿದೆ. ಆದರೆ, ಇದರಲ್ಲಿ ಬಹಳಷ್ಟು ಕಾಂಪೊನೆಂಟ್ಸ್‌ಗಳಿದ್ದು, ಕಾರಂಜಾ ಯೋಜನೆಯಲ್ಲಿ ಎಡದಂಡೆ ಕಾಲುವೆ, ಬಲದಂಡೆ ಕಾಲುವೆ ಮತ್ತು ಒಂದು ಪತ ನೀರಾವರಿ ಯೋಜನೆ ಬರುತ್ತಿದ್ದು, ಪತ ನೀರಾವರಿಯಲ್ಲಿ ಮುಖ್ಯವಾದ ಕಾಂಪೊನೆಂಟ್ಸ್ ಏನಿದೆ, ಅದನ್ನು ಪೂರ್ತಿಗೊಳಿಸಿದ್ದು, ಅಲ್ಲಿ ವಿದ್ಯುಚ್ಛಕ್ತಿ ಸಂಪರ್ಕ ಅಳವಡಿಸುವಿಕೆಯ ಕಾರ್ಯ ಆಗಬೇಕಾಗಿತ್ತು. ಬಹುಶಃ ಇಷ್ಟರೊಳಗೆ ಸದರಿ ಕಾರ್ಯ ಆಗಿರಬಹುದು. ಆಗಿಲ್ಲದಿದ್ದರೆ ಈ ತಿಂಗಳ ಕೊನೆಯೊಳಗೆ ಆ ಕೆಲಸವಾಗುತ್ತದೆ. ಈ ಕೆಲಸವಾದಾಗ ಸುಮಾರು ಆರು ಕಿಲೋಮೀಟರ್‌ಗಳವರೆಗೆ ಲಿಫ್ಟ್ ಇರಿಗೇಶನ್ ಮೂಲಕ ನೀರನ್ನು ಹರಿಬಿಡಬಹುದಾಗಿದೆ. ಎಡದಂಡೆ ಕಾಲುವೆ ಹಾಗೂ ಬಲದಂಡೆ ಕಾಲುವೆಯ ವಿವರಗಳನ್ನು ತಮಗೆ ಒದಗಿಸಿರುವ ಉತ್ತರದಲ್ಲಿ ತಿಳಿಸಲಾಗಿದೆ. ಮಾನ್ಯ ಸದಸ್ಯರಾದ ರಾಮ್‌ದಾಸ್ ಅವರಿಗೆ ಗೊತ್ತಿರುವಂತೆ ಕಾರಂಜಾ ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ಏಕ ತಡವಾಯಿತೆಂದರೆ, ಯೋಜನೆಯನ್ನು ಕೈಗೆತ್ತಿಕೊಂಡ ಪ್ರಾರಂಭದ ಕೆಲವು ವರ್ಷಗಳಲ್ಲಿ ಬಹಳ ಕಡಿಮೆ ಹಣವನ್ನು ಬಿಡುಗಡೆ ಮಾಡುತ್ತಿದ್ದು, 1990ರ ನಂತರ ಇದಕ್ಕೆ ಸಾಕಷ್ಟು ಹಣವನ್ನು ಬಿಡುಗಡೆ ಮಾಡುವುದಕ್ಕೆ ಪ್ರಾರಂಭಿಸಿದ್ದೇವೆ. ಎ.ಐ.ಡಿ.ಪಿ.ಯಲ್ಲಿ ಸದರಿ ಯೋಜನೆಯನ್ನು ಅಳವಡಿಸಿಕೊಂಡ ನಂತರ ಇದಕ್ಕೆ ಹೆಚ್ಚು ಹಣ ಒದಗಿಸಿ ವ್ಯಯ ಮಾಡುತ್ತಿರುವುದರಿಂದ ಇನ್ನು ಮುಂದಿನ ಎರಡು ವರ್ಷಗಳಲ್ಲಿ ನಾವು ಈ ಯೋಜನೆಯನ್ನು ಪೂರ್ತಿಗೊಳಿಸಬಹುದಾಗಿದೆ. ಸದರಿ ಯೋಜನೆ ನಿಗದಿತ ಅವಧಿಯಲ್ಲಿ ಪೂರ್ಣಗೊಳ್ಳದೆ ತಡವಾಗಿರುವುದಕ್ಕೆ ನಿಜವಾದ ಕಾರಣ ನನಗೆ ವೈಯಕ್ತಿಕವಾಗಿ ಅನಿಸಿರುವುದೇನೆಂದರೆ, ನಾನೊಮ್ಮೆ

ಯೋಜನೆಯ ಪರಿವೀಕ್ಷಣೆಗೆಂದು ಹೋಗಿ ಅಧ್ಯಯನ ಮಾಡಿ ಬಂದಿದ್ದು, ಯೋಜನೆಯಲ್ಲಿ ಆರ್ಥಿಕ ಶಿಸ್ತು ಸಾಕಷ್ಟು ರೀತಿಯಲ್ಲಿ ಉಲ್ಲಂಘಿಸಿರುವುದು ಕಂಡುಬಂದಿದೆ. ಆರ್ಥಿಕ ಶಿಸ್ತು ಉಲ್ಲಂಘನೆಯಾಗಿರುವ ಕಾರಣ ಯಾವ ಪ್ರಮಾಣದಲ್ಲಿ ಪ್ರಗತಿಯಾಗಬೇಕಾಗಿತ್ತೋ, ಅದು ಸಾಧ್ಯವಾಗಿಲ್ಲ. ಆರ್ಥಿಕ ಶಿಸ್ತನ್ನು ಮತ್ತೆ ಅಲ್ಲಿ ತರುವುದರ ಮೂಲಕ ಯೋಜನೆಯನ್ನು ಪೂರ್ತಿಗೊಳಿಸುವುದಕ್ಕೆ ಎಲ್ಲಾ ಕಾರ್ಯಕ್ರಮಗಳನ್ನು ಸರ್ಕಾರ ಹಾಕಿಕೊಳ್ಳುತ್ತದೆ.

ಶ್ರೀ ಎ.ರಾಮದಾಸ್: ಯೋಜನೆಯ ಒರಿಜನಲ್ ಎಸ್ಟಿಮೇಟ್ ಎಷ್ಟೆಂದು ಹೇಳಲಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ ಮುಂದೆ ಈ ವಿಷಯ ಪ್ರಸ್ತಾಪವಾಗಿ ಚರ್ಚೆಯಾಗಿರುವುದು ಮಾನ್ಯ ಸಚಿವರಿಗೆ ಗೊತ್ತಿದೆ. ಈ ಯೋಜನೆಯ ಅನುಷ್ಠಾನ ಕುರಿತಂತೆ ಯಾವ ರೀತಿಯ ಗಂಭೀರ ಲೋಪಗಳಾಗಿವೆ ಎಂಬುದರ ಬಗ್ಗೆ ಸಮಗ್ರವಾಗಿ ತನಿಖೆ ಮಾಡಬೇಕೆಂದು ಸಮಿತಿಯು ಸರ್ಕಾರಕ್ಕೆ ಹೇಳಿದೆ. ಆದರೆ, ಸರ್ಕಾರ ಅದನ್ನು ಹಗುರವಾಗಿ ತೆಗೆದುಕೊಂಡಿರುವುದರ ಬಗ್ಗೆ ಸಚಿವರೇ ಒಪ್ಪಿಕೊಂಡಿರುವುದು ಪತ್ರಿಕಾ ಹೇಳಿಕೆಗಳ ಮೂಲಕ ನಾವು ನೋಡಿದ್ದೇವೆ. ಸುಮಾರು ಮೂವತ್ತು ವರ್ಷಗಳ ಹಿಂದೆ ಅಂದರೆ 1969-70ರಲ್ಲಿ ಒಂಭತ್ತೂವರೆ ಕೋಟಿ ರೂಪಾಯಿಗಳ ಯೋಜನೆಯ ಒರಿಜಿನಲ್ ಎಸ್ಟಿಮೇಟ್ ಸ್ಯಾಂಕ್ಷನ್ ಆಗಿದೆ. ಈ ಯೋಜನೆ ಏಕೆ ಬಂತೆಂದರೆ, ಅವ್ವೊತ್ತು ಆ ಭಾಗದಲ್ಲಿ ತೀವ್ರ ಬರಗಾಲವಿದ್ದುದರಿಂದ ಅದರ ನಿವಾರಣೆಗಾಗಿ ತುರ್ತಾಗಿ ನೀರಾವರಿ ಯೋಜನೆಯನ್ನು ಕೈಗೊಳ್ಳುವ ಸಲುವಾಗಿ ಕಾರಂಜಾ ಯೋಜನೆ ಒಂಭತ್ತೂವರೆ ಕೋಟಿ ರೂಪಾಯಿಗಳಿಗೆ ಮಂಜೂರಾಯಿತು. ಮಾನ್ಯ ಸಚಿವರೇ ಹೇಳಿದಂತೆ ಇಷ್ಟು ವರ್ಷಗಳಲ್ಲಿ ಈ ಯೋಜನೆಗೆ 245 ಕೋಟಿ ರೂಪಾಯಿಗಳಷ್ಟು ಹಣ ಖರ್ಚಾಗಿದೆ. ಮುಂಬರುವ ಎರಡು ವರ್ಷಗಳಲ್ಲಿ ಯೋಜನೆಯನ್ನು ಪೂರ್ತಿಗೊಳಿಸಲು ಕಾರ್ಯಕ್ರಮ ಹಾಕಿಕೊಂಡಿದ್ದು ಇನ್ನು 95 ಕೋಟಿ ರೂಪಾಯಿಗಳು ಬೇಕಾಗುತ್ತದೆಂತಲೂ ಸಹ ತಿಳಿಸಿದ್ದಾರೆ. ಅಂದರೆ, ಇದರಲ್ಲಿ ಆರ್ಥಿಕ ಶಿಸ್ತು ಇಲ್ಲದಿರುವುದು ಒಂದು ಭಾಗವಾದರೆ ದೊಡ್ಡ ರೀತಿಯಲ್ಲಿ ಅವ್ಯವಹಾರಗಳಾಗಿರುವುದು ಮಾನ್ಯ ಸಚಿವರ ಗಮನಕ್ಕೆ ಬಂದಿದ್ದು ಸಂಬಂಧಪಟ್ಟ ಕೆಲವರ ಮೇಲೆ ಕ್ರಮ ಕೈಗೊಳ್ಳಲು ಪ್ರಯತ್ನಿಸುತ್ತಿದ್ದು, ಅದರಲ್ಲಿ ಅವರು ಎಷ್ಟು ಯಶಸ್ವಿಯಾಗುತ್ತಾರೋ ಗೊತ್ತಿಲ್ಲ. ಹಾಗಾಗಿ, ಅದರ ಬಗ್ಗೆ ತನಿಖೆ ಮಾಡಿ ಸೂಕ್ತ ಕ್ರಮ ಕೈಗೊಳ್ಳುವುದು ಅವಶ್ಯಕವಾಗಿರುವುದರಿಂದ ಯಾವ ರೀತಿಯಲ್ಲಿ ತನಿಖೆ ಮಾಡಿಸಿ ಕ್ರಮ ಕೈಗೊಳ್ಳುತ್ತಾರೆಂಬುದರ ಬಗ್ಗೆ ತಿಳಿಸಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿಸುತ್ತೇನೆ.

ಶ್ರೀ ಹೆಚ್.ಕೆ.ಪಾಟೀಲ್: ಈ ಯೋಜನೆಯ ಕೆಲಸವನ್ನು 1969ರಲ್ಲಿ ಬರಗಾಲ

ಬಿದ್ದಂಥ ಸಂದರ್ಭದಲ್ಲಿ ಪ್ರಾರಂಭಿಸಲಾಯಿತು. ಆಗ ಯೋಜನೆಯ ಅಂದಾಜು ವೆಚ್ಚ 9.9 ಕೋಟಿ ರೂಪಾಯಿಗಳಷ್ಟಿತ್ತು. ಆದರೆ, ಆಗಿನ ಸಂದರ್ಭದಲ್ಲಿ ಯಾವುದೇ ಲಿಫ್ಟ್ ಇರಿಗೇಶನ್ ಇರಲಿಲ್ಲ. ಅನಂತರ ಯೋಜನೆಯನ್ನು ಕನ್‌ಸೀವ್ ಮಾಡಿ 1993-94ರಲ್ಲಿ 258 ಕೋಟಿ ರೂಪಾಯಿಗಳಿಗೆ ಅಡ್ಮಿನಿಸ್ಟ್ರೇಟೀವ್ ಅಪ್ರೂವಲ್ ಕೊಡಲಾಯಿತು. ಯೋಜನೆಯ ಕೆಲಸವನ್ನು ಮುಗಿಸುವುದಕ್ಕೆ ರಿವೈಸ್ಡ್ ಎಸ್ಟಿಮೇಟ್ ಎಲ್ಲವನ್ನೂ ಮಾಡಿಸಿದ್ದು ಇನ್ನು 340 ಕೋಟಿ ರೂಪಾಯಿಗಳು ಬೇಕಾಗುತ್ತದೆ ಎನ್ನುವಂಥ ನಿಖರವಾದ ಅಂಕಿ ನಮಗೆ ದೊರೆತಿದೆ. ಮತ್ತು ಇದರಲ್ಲಿ ಯಾರ್ಯಾರು ಆರ್ಥಿಕ ಶಿಸ್ತನ್ನು ಉಲ್ಲಂಘಿಸಿದ್ದಾರೋ ಅವ್ಯವಹಾರಗಳನ್ನು ಎಸಗಿದ್ದಾರೋ ಅವರ ಮೇಲೆ ಕ್ರಮಗಳನ್ನು ಕೈಗೊಂಡಿದ್ದೇವೆ. ನಿಮಗೆ ಗೊತ್ತಿರುವಂತೆ ನಾವು ಏನು ಎನ್‌ಕ್ವೈರಿ ಮಾಡಿಸಿದ್ದೇವೆ, ಆ ಕುರಿತ ರಿಪೋರ್ಟನ್ನು ಸಹ ಸದನದ ಸ್ಟ್ಯಾಚುಟರಿ ಕಮಿಟಿಗೆ ಒದಗಿಸಿಕೊಟ್ಟಿದ್ದೇವೆ. ಈ ಕಾರಂಜಾ ಯೋಜನೆಯಲ್ಲಿನ ಅವ್ಯವಹಾರಗಳ ಬಗ್ಗೆ ಕೇವಲ 29 ದಿವಸಗಳಲ್ಲಿ ನಾವು ಪ್ರಿಲಿಮಿನರಿ ಇನ್‌ವೆಸ್ಟಿಗೇಷನ್ ರಿಪೋರ್ಟ್ ಅನ್ನು ತರಿಸಿಕೊಂಡು, ಈಗಾಗಲೇ ಅಲ್ಲಿನ ಎಗ್ಸಿಕ್ಯೂಟೀವ್ ಇಂಜಿನಿಯರ್ ಒಬ್ಬನನ್ನು ಸಸ್ಪೆಂಡ್ ಮಾಡಿದ್ದೇವೆ. ಅವನ ವಿರುದ್ಧ ಕ್ರಿಮಿನಲ್ ಪ್ರಾಸಿಕ್ಯೂಷನ್ ಮಾಡಲಿಕ್ಕೆ ಸಾಧ್ಯವೇ ಎಂಬ ಬಗ್ಗೆ ನಾವು ಈಗಾಗಲೇ ಕಾನೂನು ಇಲಾಖೆಯ ಜೊತೆಗೆ ಸಮಾಲೋಚನೆ ನಡೆಸಿದ್ದೇವೆ. ಕಾನೂನು ಇಲಾಖೆಯಿಂದ ಆ ಬಗ್ಗೆ ನಿಖರವಾದಂತಹ ಅಭಿಪ್ರಾಯ ಬಂದಮೇಲೆ ನಾವು ಆ ದಿಸೆಯಲ್ಲಿ ಮುಂದುವರೆಯುತ್ತೇವೆ. ಆ ನೌಕರನೊಬ್ಬನ ಮೇಲೆ ಮಾತ್ರವಲ್ಲ, ಇನ್ನೂ ಕೆಲವು ಅಧಿಕಾರಿಗಳ ವಿರುದ್ಧ ಈ ಕ್ರಮ ಕೈಗೊಳ್ಳಲು ನಾವು ಇಚ್ಛಿಸಿದ್ದೇವೆ. ಅವರುಗಳ ಮೇಲೆ ಇನ್ನೂ ಕ್ರಮ ಜರುಗಿಸಬೇಕಾಗಿದೆ. ಸ್ಟೋರ್ಸ್ ಪರ್ಚೇಸ್‌ನಲ್ಲಿ ನಡೆದಿರುವ ಅವ್ಯವಹಾರಗಳನ್ನು ಮಟ್ಟ ಹಾಕಬೇಕೆಂದು ಉದ್ದೇಶಿಸಿ ಈಗಾಗಲೇ ಆ ಬಗ್ಗೆ ತಂಡವೊಂದನ್ನು ಕಳುಹಿಸಿದ್ದು ಅವರು ಎನ್‌ಕ್ವೈರಿ ಮಾಡಿಕೊಂಡು ಬಂದಿರುತ್ತಾರೆ. ಆ ತಂಡವು ಎರಡು ದಿವಸಗಳ ಹಿಂದೆ ಇಲಾಖೆ ಕಾರ್ಯದರ್ಶಿಗೆ ತನ್ನ ವರದಿಯನ್ನು ಸಲ್ಲಿಸಿದೆ ಎಂದೂ ಸಹಾ ನನಗೆ ಮಾಹಿತಿ ಬಂದಿದೆ. ಆ ವರದಿಯಲ್ಲಿ ಯಾರ ಮೇಲೆ ಕ್ರಮ ಕೈಗೊಳ್ಳಬೇಕೆಂದು ಹೇಳಿರುತ್ತಾರೋ ಅವರ ವಿರುದ್ಧ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಒಟ್ಟಾರೆಯಾಗಿ ಈ ಯೋಜನೆಯ ಅನುಷ್ಠಾನದಲ್ಲಿ ಶಿಸ್ತನ್ನು ಮೂಡಿಸುವ ಸಲುವಾಗಿ ಈ ಸರ್ಕಾರ ದೃಢವಾದ ಹೆಜ್ಜೆಗಳನ್ನು ಇಡುತ್ತಿದೆ ಎಂದು ಸದನಕ್ಕೆ ತಿಳಿಸಬಯಸುತ್ತೇನೆ.

ಶ್ರೀ ವೈ.ಕೆ.ರಾಮಯ್ಯ (ಹುಲಿಯೂರು ದುರ್ಗ): ಮಾನ್ಯ ಅಧ್ಯಕ್ಷರೇ, ಕಾರಂಜಾ ನೀರಾವರಿ ಯೋಜನೆ ಸೇರಿದಂತೆ ರಾಜ್ಯದ ಎಲ್ಲಾ ನೀರಾವರಿ ಯೋಜನೆಗಳ ಅನುಷ್ಠಾನ ಸ್ಥಗಿತಗೊಂಡಿದೆ ಎಂಬುದು ನನ್ನ ಅಭಿಪ್ರಾಯವಾಗಿದೆ. ಆರ್ಥಿಕ ಶಿಸ್ತಿನ ಉಲ್ಲಂಘನೆಯೇ ಈ ರೀತಿ ಯೋಜನೆಗಳು ಸ್ಥಗಿತಗೊಳ್ಳಲಿಕ್ಕೆ ಪ್ರಮುಖವಾದಂತಹ

ಕಾರಣವಾಗಿದೆ. ಕಾರಂಜಾ ಯೋಜನೆ ಅನುಷ್ಠಾನದಲ್ಲಿ ಅವ್ಯವಹಾರ ನಡೆದಿದೆ ಎಂದು ಮಾನ್ಯ ಸಚಿವರು ಬಹಳ ಸ್ಪಷ್ಟವಾಗಿ ಈ ಸದನದಲ್ಲಿ ಒಪ್ಪಿಕೊಂಡಿರುತ್ತಾರೆ. ಅದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಇತ್ತೀಚೆಗೆ ನಾನೂ ಕೂಡ ಕಾರಂಜಾ ಯೋಜನಾ ಪ್ರದೇಶಕ್ಕೆ ಭೇಟಿ ನೀಡಿದ್ದೆ. ಬೇರೆ ಯೋಜನೆಗಳಿಗೆ ಸಂಬಂಧಪಟ್ಟ ಕಾಗದ ಪತ್ರಗಳನ್ನೂ ಕೂಡ ನಾನು ನೋಡಿದ್ದೇನೆ. ಸದನದ ಸಮಿತಿ ಸಹಾ ಕಾರಂಜಾ ಯೋಜನಾ ಪ್ರದೇಶಕ್ಕೆ ಭೇಟಿ ನೀಡಿ ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ. ಆಗಿರತಕ್ಕಂತಹ ಆರ್ಥಿಕ ಶಿಸ್ತಿನ ಉಲ್ಲಂಘನೆ ಬಗ್ಗೆ ಇಷ್ಟೊಂದು ಮಾಹಿತಿ ಸರ್ಕಾರದ ಮುಂದೆ ಇದ್ದಾಗ್ಯೂ ಕೂಡ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳಲಿಕ್ಕೆ ಸರ್ಕಾರ ಏಕೆ ಇನ್ನೂ ಮೀನ-ಮೇಷ ಎಣಿಸುತ್ತಿದೆಯೋ ಗೊತ್ತಿಲ್ಲ. ಮಾನ್ಯ ಅಧ್ಯಕ್ಷರು ದಯವಿಟ್ಟು ಈ ವಿಷಯದ ಬಗ್ಗೆ ನಿಯಮ 68 ಅಡಿಯಲ್ಲಿ ಅಥವಾ ತಮ್ಮ ವಿವೇಚನೆಗೆ ಸಂಬಂಧಪಟ್ಟಂತಹ ಕಾನೂನಿನ ಚೌಕಟ್ಟಿನೊಳಗೆ ಅರ್ಧ ಗಂಟೆ ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕೆಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು: ಆ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಪ್ರಕಾಶ್ ಖಂಡ್ರೆ: ಮಾನ್ಯ ಅಧ್ಯಕ್ಷರೇ, 2000-2001ನೇ ಸಾಲಿನಲ್ಲಿ ಈ ಯೋಜನೆಗಾಗಿ ಮಾನ್ಯ ಸಚಿವರು ಎಷ್ಟು ಹಣವನ್ನು ಒದಗಿಸಲಾಗಿದೆ ಎಂದು ತಿಳಿಸುತ್ತಾರೆಯೇ?

ಶ್ರೀ ಹೆಚ್.ಕೆ.ಪಾಟೀಲ್: ಮಾನ್ಯ ಅಧ್ಯಕ್ಷರೇ, ಮುಂದಿನ ಎರಡು ವರ್ಷದೊಳಗಾಗಿ ಈ ಯೋಜನೆಯನ್ನು ಸಂಪೂರ್ಣವಾಗಿ ಮುಗಿಸಬೇಕೆನ್ನುವ ನಿರ್ಣಯವನ್ನು ಈ ಸರ್ಕಾರ ಮಾಡಿದೆ. ಎ.ಐ.ಡಿ.ಪಿ. ಕಾರ್ಯಕ್ರಮದ ಅಡಿಯಲ್ಲಿ ನಾವು ಈ ಯೋಜನೆಗೆ ಹಣಕಾಸನ್ನು ಪಡೆದುಕೊಳ್ಳಬಹುದಾಗಿದೆ. ಅವಶ್ಯಕ ಇರತಕ್ಕಂತಹ ಹಣವನ್ನೆಲ್ಲಾ ಒದಗಿಸಿಕೊಂಡು ಎರಡು ವರ್ಷದೊಳಗಾಗಿ ಈ ಯೋಜನೆಯನ್ನು ಮುಗಿಸಬೇಕೆಂಬುದೇ ಸರ್ಕಾರದ ಇಚ್ಛೆಯಾಗಿದೆ.

ಶ್ರೀ ಕೆ.ಹೆಚ್.ಹನುಮಗೌಡ (ಹಾಸನ): ಮಾನ್ಯ ಅಧ್ಯಕ್ಷರೇ, ನಿರ್ಭೀತಿಯಿಂದ ಈ ಯೋಜನೆಯಲ್ಲಿ ಹಣವನ್ನು ಹೊಡೆದಿದ್ದಾರೆ. ಯಾವ ಮುಲಾಜೂ ಕೂಡ ಇಲ್ಲದೇ ಇಲ್ಲಿ ಹಣ ಹೊಡೆದಿದ್ದಾರೆ. ಯಾರ ಹೆದರಿಕೆ, ಬೆದರಿಕೆಯೂ ಕೂಡ ಇಲ್ಲದಂತೆ ಹಣ ದುರುಪಯೋಗವಾಗಿದೆ. ನಾವು ಯೋಜನಾ ಸ್ಥಳಕ್ಕೆ ಭೇಟಿ ನೀಡಿದಾಗ ಅಲ್ಲಿದ್ದ ಇಂಜಿನಿಯರ್‌ರವರನ್ನು ಕೇಳಿದಾಗ ಒಂದು ಟ್ರೀ-ಗಾರ್ಡ್‌ಗೆ 500 ರೂಪಾಯಿಗಳಾಗುತ್ತದೆ ಎಂದು ಹೇಳಿದರು. ಆದರೆ ಒಂದಕ್ಕೆ ಮೂರು ಸಾವಿರ ಚಿಲ್ಲರೆ ಬೆಲೆಯನ್ನು ನಮೂದಿಸಿ ಹಣವನ್ನು ಡ್ರಾ ಮಾಡಲಾಗಿದೆ. ಫುಟ್ ಬ್ರಿಜ್ ಒಂದಕ್ಕೆ

99,995 ರೂಪಾಯಿಗಳನ್ನು ಚಾರ್ಜ್ ಮಾಡಿದ್ದಾರೆ. ಆ ಬಗ್ಗೆ ಇಂಜಿನಿಯರ್‌ಗಳನ್ನು ಕೇಳಿದರೆ ಅದರ ಬೆಲೆ ಕೇವಲ 10 ಸಾವಿರ ರೂಪಾಯಿಗಳಾಗುತ್ತದೆ ಎಂದು ಹೇಳಿದರು. ಇಷ್ಟು ವರ್ಷಗಳ ಕಾಲ ನಿರ್ಭೀತಿಯಿಂದ ಅಲ್ಲಿ ದರೋಡೆ ಮಾಡಿದ್ದಾರೆ. ಅಲ್ಲಿ ನಿಮ್ಮ ಇಲಾಖೆ ಇರಲಿಲ್ಲವೇ? ಇಂಜಿನಿಯರ್‌ಗಳು ಇರಲಿಲ್ಲವೇ? ಸಂಬಂಧಪಟ್ಟಂತಹ ಅಧಿಕಾರಿಗಳು ಇರಲಿಲ್ಲವೇ? ಹೀಗೆ ದೇಶದ ದುಡ್ಡು ಹಾಳಾದರೆ ರೈತರಿಗೆ ಎಲ್ಲಿ ಪ್ರಯೋಜನವಾಗುತ್ತದೆ? ಯಾರ ಮನೆ ದುಡ್ಡು ಎಂದುಕೊಂಡು ಅವರು ಇದನ್ನು ಹೂಡದಿದ್ದಾರೆ. ನೀವು ಯೋಜನಾ ಸ್ಥಳಕ್ಕೆ ಭೇಟಿ ನೀಡಿದ್ದೆ ಎಂದು ಹೇಳಿದಿರಿ. ನಾನು ಅಲ್ಲಿಗೆ ಹೋದಾಗ ಸಹಾ ಅಲ್ಲಿದ ಇಂಜಿನಿಯರ್‌ಗಳು ಮಾನ್ಯ ಪಾಟೀಲರು ಇಲ್ಲಿಗೆ ಬಂದು ನೋಡಿಕೊಂಡು ಹೋಗಿದ್ದಾರೆಂದು ಹೇಳಿದರು. ನೀವು ಅಲ್ಲಿಗೆ ಹೋಗಿ ನೋಡಿಕೊಂಡು ಬಂದು ಮೂರು ತಿಂಗಳಾಯಿತು. ಅಲ್ಲಿರುವವರಿಗೆ ಯಾರೂ ಹೇಳುವವರು, ಕೇಳುವವರಿಲ್ಲ. ಅಲ್ಲಿರುವವರನ್ನು ಯಾವುದಕ್ಕೆ ಎಷ್ಟು ಹಣ ಖರ್ಚು ಮಾಡಲಾಗಿದೆ ಎಂದು ಏವರ ಕೇಳಿದರೆ, ಎಲ್ಲದಕ್ಕೂ ಟೆಂಡರ್ ಕರೆದಿದ್ದೇವೆ ಎಂದು ಹೇಳುತ್ತಾರೆ. ಅದು ಯಾವ ರೀತಿಯ ಟೆಂಡರೋ ಗೊತ್ತಿಲ್ಲ. 300 ರೂಪಾಯಿಗಳು ಬೆಲೆ ಬಾಳತಕ್ಕ ವಸ್ತುವಿಗೆ ಒಬ್ಬ 5 ಸಾವಿರ ರೂಪಾಯಿಗಳನ್ನು ನಮೂದಿಸಿದರೆ ಮತ್ತೊಮ್ಮೆ 4,500ರೂಪಾಯಿಗಳನ್ನು ನಮೂದಿಸುತ್ತಾನೆ, ಇನ್ನೊಬ್ಬ 4,000 ರೂಪಾಯಿಗಳನ್ನು ನಮೂದಿಸುತ್ತಾನೆ. ಈ ಮೂರೇ ಜನ ಟೆಂಡರ್ ಫಾರಂ ತೆಗೆದುಕೊಂಡು ಟೆಂಡರ್ ಹಾಕಿರುತ್ತಾರೆ. ಈ ರೀತಿ ಸಿಕ್ಕಾಪಟ್ಟೆ ದುಡ್ಡು ತಿಂದಿದ್ದಾರೆ. ಅದನ್ನು ಹೇಳುವುದಕ್ಕೆ ನನಗೆ ನಾಚಿಕೆಯಾಗುತ್ತದೆ. 1972ನೇ ಇಸವಿಯಲ್ಲಿ ಮಾನ್ಯ ದೇವರಾಜ್ ಅರಸ್‌ರವರ ಕಾಲದಲ್ಲಿ ಇಲ್ಲಿ ಭೀಕರವಾದ ಬರಗಾಲವಿದ್ದಂತಹ ಸಂದರ್ಭದಲ್ಲಿ ಎರಡು ವರ್ಷದೊಳಗಾಗಿ ಈ ಯೋಜನೆ ಮುಗಿಸಬೇಕೆಂದು ಉದ್ದೇಶಿಸಿ ಸದರಿ ಯೋಜನೆಯನ್ನು ಆರಂಭಿಸಲಾಗಿತ್ತು. ಆರಂಭದಲ್ಲಿ 10 ಕೋಟಿ ರೂಪಾಯಿಗಳಿದ್ದ ಅಂದಾಜು ವೆಚ್ಚ ಇವತ್ತು 250 ಕೋಟಿ ರೂಪಾಯಿಗಳು ಖರ್ಚಾದರೂ ಯೋಜನೆಯನ್ನು ಪೂರ್ಣಗೊಳಿಸಲು ಸಾಧ್ಯವಾಗಿಲ್ಲ. ಯಾರಿಗೂ ಏನೂ ಭಯವಿಲ್ಲ. ಅಲ್ಲಿನ ಸಂಬಂಧಪಟ್ಟವರಿಗೆ ಏಕೆ ಹೀಗಾಯಿತು ಎಂದು ಕೇಳಿದರೆ ಅವರಿಂದ ಮಾತೇ ಬರುವುದಿಲ್ಲ. ದೇಶದ ಜನ ತೆರಿಗೆಯನ್ನು ಬಹಳ ಕಷ್ಟಪಟ್ಟು ಕೊಟ್ಟಿರುತ್ತಾರೆ. ಅವರು ಏತಕ್ಕೋಸ್ಕರ ಆ ತೆರಿಗೆ ಹಣ ಕೊಟ್ಟಿದ್ದಾರೆ ಎಂಬುದನ್ನು ಯೋಚಿಸಬೇಕು. ಇಲ್ಲಿ ಬಂದೋಬಸ್ತ್ ಮಾಡಿ ರೈತರಿಗೆ ಅನುಕೂಲ ಮಾಡಿಕೊಡದಿದ್ದರೆ ಸರ್ಕಾರ ಇದ್ದು ಏನು ಪ್ರಯೋಜನ? ಮಂತ್ರಿ ಇದ್ದು ಏನು ಪ್ರಯೋಜನ ಅಥವಾ ಎಂ.ಎಲ್.ಎ ಇದ್ದು ಏನು ಪ್ರಯೋಜನ? ಬಡಪಾಯಿ ಜನರು ಯಾರ ಹತ್ತಿರ ತಮ್ಮ ಕಷ್ಟವನ್ನು ಹೇಳಿಕೊಳ್ಳಬೇಕು? ಅಲ್ಲಿ ಕಾಲುವೆಗಳನ್ನು ತೋಡಿದ್ದಾರೆ. ಹೇಗೆ ತೋಡಿದ್ದಾರೆ ಎಂದರೆ ಕಲ್ಲನ್ನು ತೆಗೆದು ಪಕ್ಕಕ್ಕೇ ಹಾಕಿದ್ದಾರೆ. ಅದನ್ನು ಹಾಗೆಯೇ ಬಿಟ್ಟು ರಿವೆಟ್‌ಮೆಂಟ್ ಎಂದು ಕೋಟ್ಯಾಂತರ ರೂಪಾಯಿಗಳನ್ನು

ಚಾರ್ಜ್ ಮಾಡಿದ್ದಾರೆ. ಅದನ್ನು ಹೇಗೆ ಕೊಟ್ಟರೋ ಗೊತ್ತಿಲ್ಲ. ನಿಮ್ಮ ಇಲಾಖೆಯ ಚೀಫ್ ಇಂಜಿನಿಯರ್ ಮತ್ತು ಇಂಜಿನಿಯರ್ ಅಲ್ಲಿ ಹೋಗಿ ಚೆಕ್ ಮಾಡಿರಲಿಲ್ಲವೇ? ಎಲ್ಲರೂ ಹೋಗಿ ನೋಡಿದ್ದಾರೆ. ಆದರೂ ಹೀಗಾಗಲು ಕಾರಣ ಏನು? ರೈತರು ಕೊಟ್ಟಂತಹ ತರಿಗೆ ಹಣವನ್ನು ನಿರ್ಭೀತಿಯಿಂದ ಯಾರ ಮುಲಾಜೂ ಇಲ್ಲದೇ ದರೋಡೆ ಮಾಡುತ್ತಿದ್ದಾರೆ. ಇದನ್ನು ತಪ್ಪಿಸದೇ ಹೋದರೆ ಖಂಡಿತವಾಗಿಯೂ ಕೂಡ ಈ ದೇಶ ಉದ್ಧಾರವಾಗುವುದಿಲ್ಲ. ರೈತರಂತೂ ಉದ್ಧಾರವಾಗಲಿಕ್ಕೆ ಸಾಧ್ಯವೇ ಆಗುವುದಿಲ್ಲ. ಈ ಅನ್ಯಾಯವನ್ನು ಮಾನ್ಯ ಸಚಿವರು ಸರಿಪಡಿಸಿ ಸಂಬಂಧಪಟ್ಟವರ ಮೇಲೆ ಯಾವ ದಿನಾಂಕದೊಳಗಾಗಿ ಕ್ರಮ ತೆಗೆದುಕೊಳ್ಳುತ್ತೇವೆ ಎಂಬುದಾಗಿ ದಯವಿಟ್ಟು ಸದನದಲ್ಲಿ ನಿರ್ದಿಷ್ಟವಾಗಿ ಹೇಳಬೇಕೆಂದು ನಾನು ಕೋರುತ್ತೇನೆ.

ಶ್ರೀ ಹೆಚ್.ಕೆ.ಪಾಟೀಲ್: ಮಾನ್ಯ ಅಧ್ಯಕ್ಷರೇ, ಹಿರಿಯ ಸದಸ್ಯರಾದಂತಹ ಹನುಮೇಗೌಡರು ಆಡಿರತಕ್ಕಂತಹ ಮಾತುಗಳ ಹಿಂದಿನ ನೋವನ್ನು ನಾನಂತೂ ಅರ್ಥ ಮಾಡಿಕೊಂಡಿರುತ್ತೇನೆ. ಮಾನ್ಯ ಸದಸ್ಯರು ಏನೊಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದರೋ ಅದೇ ಅಭಿಪ್ರಾಯ ನನ್ನದೂ ಸಹ ಆಗಿದೆ. ನಿಮಗೆ ಇರುವ ಆಕ್ರೋಶಕ್ಕಿಂತ ಎರಡರಷ್ಟು ಆಕ್ರೋಶವನ್ನು ನಾನು ಕೇವಲ ಶಬ್ದಗಳಲ್ಲಿ ಅಷ್ಟೇ ಅಲ್ಲ ಕೃತಿಗಳಲ್ಲಿಯೂ ಕೂಡ ವ್ಯಕ್ತ ಮಾಡಿರುತ್ತೇನೆ. ತಾವೂ ಕೂಡ ಮೊನ್ನೆ ಕಾರಂಜಾ ಯೋಜನಾ ಪ್ರದೇಶಕ್ಕೆ ಭೇಟಿ ನೀಡಿದ್ದಿರಿ ಎಂದು ನಾನು ಭಾವಿಸಿಕೊಳ್ಳುತ್ತೇನೆ. ತಾವು ಅಲ್ಲಿನ ಟೆಂಡರ್ ಬಗ್ಗೆ ಮತ್ತು ಪರ್ಚೇಸ್‌ಗಳ ಬಗ್ಗೆ ಹೇಳಿದಿರಿ. 300 ರೂಪಾಯಿಗಳು ಬೆಳೆ ಬಾಳತಕ್ಕ ಟ್ರೀ-ಗಾರ್ಡ್ ಅನ್ನು ಸುಮಾರು 3-4 ಸಾವಿರ ರೂಪಾಯಿಗಳ ಬೆಲೆ ನಮೂದಿಸಿ ಅಲ್ಲಿ ಖರೀದಿ ಮಾಡಲಾಗಿದೆ. 150 ರೂಪಾಯಿಗಳು ಬೆಲೆ ಬಾಳತಕ್ಕ ಕೆಲವೊಂದು ವಸ್ತುಗಳನ್ನು 2 ಸಾವಿರದಿಂದ 2,500 ರೂಪಾಯಿಗಳವರೆಗೆ ಬೆಲೆ ನೀಡಿ ಖರೀದಿಸಿರುವುದೂ ಸಹಾ ನಮ್ಮ ಗಮನಕ್ಕೆ ಬಂದಿದೆ. ಆ ಕಾರಣದಿಂದಾಗಿಯೇ ನಾನು ಅಲ್ಲಿನ ಸ್ಟೋರ್ ಪರ್ಚೇಸಸ್ ಬಗ್ಗೆ ತಕ್ಷಣವೇ ಸಮಿತಿಯೊಂದನ್ನು ಅಲ್ಲಿಗೆ ಕಳುಹಿಸಿ ಅವರಿಂದ ವರದಿಯೊಂದನ್ನು ತರಿಸಿಕೊಂಡಿರುತ್ತೇನೆ. ಇಲ್ಲಿ ಅವ್ಯವಹಾರವಾಗಿದೆ ಎಂದು ನಮಗೆ ಮೇಲ್ನೋಟಕ್ಕೆ ಗೊತ್ತಾದ ತಕ್ಷಣ ಕಾರಂಜಾ ಯೋಜನೆಯಲ್ಲಿ ಅಥವಾ ಎಲ್ಲೆಲ್ಲಿ ಅವ್ಯವಹಾರವಾಗಿದೆ ಎಂದು ನಮಗೆ ಸಂಶಯ ಬಂತೋ ಅಂತಹ ಯೋಜನೆಗಳಲ್ಲಿ ಈ ವರ್ಷ ನಾವು ತಿಳಿಸುವವರೆಗೆ ಯಾರೇ ಎಗ್ಸಿಕ್ಯೂಟೀವ್ ಇಂಜಿನಿಯರ್ ಆಗಲೀ, ಸೂಪರಿಂಟೆಂಡಿಂಗ್ ಇಂಜಿನಿಯರ್‌ರವರಾಗಲೀ ಸ್ಟೋರ್ಸ್‌ಗೆ ಏನೂ ಕೂಡ ಪರ್ಚೇಸ್ ಮಾಡಬೇಕಾಗಿದ್ದರೆ ಅದರ ಅವಶ್ಯಕತೆಯನ್ನು ಸರಿಯಾಗಿ ಮನವರಿಕೆ ಮಾಡಿ, ಸದರಿ ಪರ್ಚೇಸ್ ಪ್ರಸ್ತಾವನೆಯನ್ನು ಸಮಿತಿಯ ಮುಂದಿಟ್ಟು ಅದರ ಅನುಮತಿ ಪಡೆದೇ ಖರೀದಿ ಮಾಡಬೇಕು ಎನ್ನುವಂತಹ ಒಂದು ಹೊಸ ವ್ಯವಸ್ಥೆಯನ್ನು ನಾವು ಮಾಡಿದ್ದೇವೆ. ಮಾನ್ಯ ಸದಸ್ಯರು ಕಾಲುವೆ ತೋಡಿರುವುದರ ಬಗ್ಗೆ

ಪ್ರಸ್ತಾಪ ಮಾಡಿದರು. ಅವರು ಹೇಳಿದ್ದೆಲ್ಲಾ ನಿಜ. ನಾವು ಅಲ್ಲಿದ್ದ ಯಾವೊಬ್ಬ ಎಗ್ಸಿಕ್ಯೂಟೀವ್ ಇಂಜಿನಿಯರ್‌ನನ್ನು ಸಸ್ಪೆಂಡ್ ಮಾಡಿ ಅವನ ಮೇಲೆ ಕ್ರಿಮಿನಲ್ ಮೊಕದ್ದಮೆಯೊಂದನ್ನು ಹೂಡಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆಯೋ, ಅದೇ ಅಧಿಕಾರಿ ಸುಮಾರು ಎರಡೂವರೆ ಕೋಟಿ ರೂಪಾಯಿಗಳ ಒಂದು ಕೆಲಸವನ್ನು ತನಗೆ ಅನುಕೂಲವಾಗಲೀ ಅಥವಾ ತನ್ನ ಅಧಿಕಾರ ವ್ಯಾಪ್ತಿಯೊಳಗೆ ಬರಲೆಂಬ ಉದ್ದೇಶದಿಂದ ಸದರಿ ಕೆಲಸವನ್ನು ಒಂದಕ್ಕೆ 25 ಸಾವಿರ ರೂಪಾಯಿಗಳಂತೆ 2,200 ಕೆಲಸಗಳನ್ನಾಗಿ ವಿಭಜನೆ ಮಾಡಿ ತನ್ನ ಮನಸ್ಸಿಗೆ ಬಂದ ಹಾಗೆ ಬೇಕಾದವರಿಗೆ ಆ ಕೆಲಸಗಳನ್ನು ಕೊಟ್ಟಿದ್ದಾನೆ. ಅಲ್ಲಿ ಕೆಲಸಗಳು ಅರ್ಧಂಬರ್ಧ ಆಗಿರತಕ್ಕದ್ದು ಸತ್ಯವಾಗಿದೆ. ಅದಕ್ಕಾಗಿಯೇ ಇದಕ್ಕೆ ಅಗತ್ಯವಾದ ಕ್ರಮಗಳನ್ನೆಲ್ಲಾ ನಾವು ತೆಗೆದುಕೊಳ್ಳುತ್ತಿದ್ದೇವೆ. ಕಾನೂನಾತ್ಮಕ ಕ್ರಮವನ್ನು ನಾವು ತೆಗೆದುಕೊಳ್ಳಬೇಕಾಗಿರತಕ್ಕಂತಹ ಹಿನ್ನೆಲೆಯಲ್ಲಿ ಎಲ್ಲಾ ವಿವರಗಳನ್ನೂ ಕೂಡ ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಹೋಗುವುದಿಲ್ಲ. ಆದರೆ ಒಂದೇ ಒಂದು ಭರವಸೆಯನ್ನು ನಾನು ಈ ಸಂದರ್ಭದಲ್ಲಿ ತಮಗೆ ಕೂಡಬಯಸುತ್ತೇನೆ. ಜನರ ತೆರಿಗೆ ಹಣ ಈ ರೀತಿಯಲ್ಲಿ ಅವ್ಯವಹಾರವಾಗಿ ರಾಜ್ಯದ ಜನತೆಗೆ, ರೈತರಿಗೆ ಲುಕ್ಸಾನು ಆಗುತ್ತಿರುವುದನ್ನು ನಿಲ್ಲಿಸಲಿಕ್ಕೆ ಎಲ್ಲಾ ರೀತಿಯ ಬಿಗಿ ಕ್ರಮಗಳನ್ನು ಸರ್ಕಾರ ತೆಗೆದುಕೊಳ್ಳುತ್ತದೆ. ಇನ್ನೂ ಹೆಚ್ಚಿನ ಕ್ರಮವನ್ನು ನಮ್ಮ ಇಲಾಖೆಯ ವತಿಯಿಂದ ಕೈಗೊಳ್ಳಬೇಕಂಬುದು ತಮ್ಮ ಇಚ್ಛೆಯಾಗಿದ್ದರೆ ಅದಕ್ಕೆ ಅಗತ್ಯವಾಗಿರತಕ್ಕ ಸಲಹೆ ಮತ್ತು ಮಾರ್ಗದರ್ಶನವನ್ನು ತಾವು ನೀಡಬೇಕೆಂದು ಕೋರುತ್ತೇನೆ. ಆ ಪ್ರಕಾರವಾಗಿ ನಾವು ಬಿಗಿ ಕ್ರಮವನ್ನು ಕೈಗೊಳ್ಳುತ್ತೇವೆಂದು ಭರವಸೆ ನೀಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೇ, ಅಲ್ಲಿ ಬಹಳ ಒತ್ತಡ ಬರಬಹುದು, ಮಾನ್ಯ ಸಚಿವರು ಅದನ್ನು ಲೆಕ್ಕಿಸದೇ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳಬೇಕೆಂದು ಕೋರುತ್ತೇನೆ.

ಶ್ರೀ ಸಿ.ಭೈರೇಗೌಡ: ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಸದರಿ ಸ್ಥಳಕ್ಕೆ ಭೇಟ ನೀಡಿ ಬಂದಿದ್ದಾರೆ. ಮೇಲ್ನೋಟಕ್ಕೆ ಅಲ್ಲಿ ಅವ್ಯವಹಾರವಾಗಿರುವುದನ್ನು ಮಾನ್ಯ ಸಚಿವರು ಖಚಿತಪಡಿಸಿಕೊಂಡಿರುತ್ತಾರೆ. ಮಾನ್ಯ ಸಚಿವರು ಬರೀ ಅಲ್ಲಿಗೆ ಹೋಗಿ ಬರುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ನಾನು ಮಂತ್ರಿಯಾಗಿದ್ದಂತಹ ಸಂದರ್ಭದಲ್ಲಿ ಮಾನ್ಯ ಕಾಗೋಡು ತಿಮ್ಮಪ್ಪನವರ ಕ್ಷೇತ್ರದ ವ್ಯಾಪ್ತಿಯಲ್ಲಿ ಕಂಡು ಬಂದಂತಹ ಇಂತಹದ್ದೇ ಪ್ರಕರಣವೊಂದಲ್ಲಿ ನಾನು ಸ್ಥಳದಲ್ಲೇ ಸಂಬಂಧಪಟ್ಟವರ ವಿರುದ್ಧ ಕ್ರಮ ತೆಗೆದುಕೊಂಡಂತಹ ಉದಾಹರಣೆ ಇದೆ. ಇದೊಂದು ಉದಾಹರಣೆಯಲ್ಲ, ಈ ರೀತಿಯ ಅನೇಕ ಉದಾಹರಣೆಗಳನ್ನು ನೀವು

ನೋಡಬಹುದಾಗಿದೆ. ಇದೊಂದೇ ಪ್ರಕರಣದಲ್ಲಿ ಮಾತ್ರವಲ್ಲ, ಈ ರೀತಿಯಾಗಿ ಹಣದ ದುರುಪಯೋಗ ಆಗಿರತಕ್ಕ ಎಲ್ಲಾ ಪ್ರಕರಣಗಳೂ ಕೂಡ ಕ್ರಿಮಿನಲ್ ಆಫೆನ್ಸ್ ಆಗುತ್ತವೆ. ಇಂತಹ ಪ್ರಕರಣಗಳಲ್ಲಿ ಮಾನ್ಯ ಸಚಿವರು ತಕ್ಷಣವೇ ಸ್ಥಳದಲ್ಲಿಯೇ ಸಂಬಂಧಪಟ್ಟವರ ವಿರುದ್ಧ ಪೊಲೀಸರಿಗೆ ದೂರನ್ನು ಕೊಟ್ಟು ತಪ್ಪಿತಸ್ಥ ಅಧಿಕಾರಿಗಳನ್ನು ದಸ್ತಗಿರಿ ಮಾಡಿಸತಕ್ಕಂತಹ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಆಗ್ರಹಿಸುತ್ತೇನೆ.

1.30 ಪಿ.ಎಂ

ಈ ರೀತಿಯ ನೂರಾರು ಪ್ರಕರಣಗಳಲ್ಲಿ ನಾನೇ ಹಿಂದೆ ದಸ್ತಗಿರಿಯನ್ನು ಮಾಡಿಸಿದ್ದೇನೆ. ಅಲ್ಲಿ ಸಾವಿರಾರು ಕೋಟಿ ರೂಪಾಯಿಗಳು ಹಣ ದುರುಪಯೋಗವಾಗಿದೆ. ಹೀಗಿದ್ದರೂ ಕೂಡ ನೀವು ಕೇವಲ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ, ಎಂದು ಹೇಳಿಬಿಟ್ಟರೆ ಅದರಲ್ಲಿ ಅರ್ಥವೇ ಇರುವುದಿಲ್ಲ. ಈಗಾಗಲೇ ನೀವೇನು ಉತ್ತರ ಕೊಟ್ಟಿದ್ದೀರಿ ಅದರಲ್ಲಿ ಅರ್ಥವಿಲ್ಲ. ನನಗೆ ಸಲಹೆಯನ್ನು ಕೊಡಿ ಎಂದು ನೀವು ಕೇಳಿದ್ದೀರಿ. ನಾನು ಈಗ ನಿಮಗೆ ಸಲಹೆ ಕೊಡುವುದೇನೆಂದರೆ ಆ ಅಧಿಕಾರಿಗಳ ಮೇಲೆ ಯಾವ ಮುಲಾಜಿಲ್ಲದೇ ಕ್ರಿಮಿನಲ್ ಕೇಸ್‌ನ್ನು ಹಾಕಿ. ಆ ರೀತಿಯಲ್ಲಿ ಕ್ರಿಮಿನಲ್ ಕೇಸ್‌ನ್ನು ಹಾಕುವುದಕ್ಕೆ ಸರ್ಕಾರ ಬದ್ಧವಾಗಿದೆಯೇ ಎಂಬ ಬಗ್ಗೆ ದಯವಿಟ್ಟು ಹೇಳಿ.

ಶ್ರೀ ಎಂ.ಚಂದ್ರಪ್ಪ (ಭರಮಸಾಗರ): ಮಾನ್ಯ ಅಧ್ಯಕ್ಷರೆ, ಒಂಭತ್ತೂವರೆ ಕೋಟಿ ರೂಪಾಯಿಗಳ ಎಸ್ಟಿಮೇಟ್ ಹಾಕಿ ಇದುವರೆಗೆ 240 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ ಎಂದು ಹೇಳಿದ್ದಾರೆ. ಇಲ್ಲಿಯವರೆಗೆ ಕೇವಲ ಒಬ್ಬ ಎಕ್ಸಿಕ್ಯುಟೀವ್ ಇಂಜಿನಿಯರ್‌ಗೆ ಸಸ್ಪೆಂಡ್ ಮಾಡಲಾಗಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಈಗಾಗಲೇ ಅಲ್ಲಿ ಮುಖ್ಯ ಇಂಜಿನಿಯರ್ ಹಾಗೂ ಸೂಪರಿಂಟೆಂಡಿಂಗ್ ಇಂಜಿನಿಯರ್ ಒಳಗೊಂಡಂತೆ ಸುಮಾರು 90 ಪರ್ಸೆಂಟ್ ಇಂಜಿನಿಯರ್‌ಗಳು ನಿವೃತ್ತಿಯಾಗಿ ಮನೆಗೆ ಹೋಗಿದ್ದಾರೆ. ಇನ್ನು 10 ಪರ್ಸೆಂಟ್ ಇಂಜಿನಿಯರ್‌ಗಳು ಮಾತ್ರ ಅಲ್ಲಿದ್ದಾರೆ. ಅವರ ಮೇಲೆ ಕ್ರಮ ತೆಗೆದುಕೊಳ್ಳುವಷ್ಟರಲ್ಲಿ ಅವರಿಗೂ ಕೂಡ ನಿವೃತ್ತಿಯಾಗುವ ಸಂದರ್ಭವಿದೆ. ಇದಕ್ಕೆ ಪೂರಕವಾಗಿ ಈಗ 95 ಕೋಟಿ ರೂಪಾಯಿಗಳ ರೀ-ಎಸ್ಟಿಮೇಟ್‌ನ್ನು ಕೂಡ ಮಾಡಿದ್ದಾರೆ. ನಾನು ಹೇಳುವುದೇನೆಂದರೆ ಈಗೇನು ಅಲ್ಲಿ ಸೂಪರಿಂಟೆಂಡಿಂಗ್ ಇಂಜಿನಿಯರ್ ಹಾಗೂ ಎಕ್ಸಿಕ್ಯುಟೀವ್ ಇಂಜಿನಿಯರ್ ಇದ್ದಾರೆ ಅವರೆಲ್ಲರನ್ನೂ ಕೂಡ ತಕ್ಷಣದಿಂದ ಸಸ್ಪೆಂಡ್ ಮಾಡಬೇಕು ಮತ್ತು ಅವರ ಮೇಲೆ ಕ್ರಿಮಿನಲ್ ಕೇಸ್‌ನ್ನು ಕೂಡ ಹಾಕಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್.ಕೆ.ಪಾಟೀಲ್: ಮಾನ್ಯ ಅಧ್ಯಕ್ಷರೆ, ನಾವೇನು ಈಗ ಕ್ರಮವನ್ನು

ತೆಗೆದುಕೊಂಡಿದ್ದೇವೆ ಅದರಿಂದ ಮಾನ್ಯ ಭೈರೇಗೌಡರು ತೃಪ್ತರಾದ ಹಾಗೆ ಕಾಣಲಿಲ್ಲ. ನಾನು ನಿಮ್ಮ ಮಾಹಿತಿಗಾಗಿ ಹೇಳುತ್ತಿದ್ದೇನೆ. ಬಹುಶಃ ನಮ್ಮ ಸರ್ಕಾರದೊಳಗೆ ಪ್ರಿಲಿಮಿನರಿ ಇನ್‌ವೆಸ್ಟಿಗೇಶನ್ ಮಾಡುವುದಕ್ಕೆ ನಾವೇನು ಕಮಿಟಿಯನ್ನು ಕಳುಹಿಸಿದ್ದೀವಿ ಅದು ಕೇವಲ 29 ದಿವಸಗಳಲ್ಲಿ ಸುಮಾರು ಎರಡೂವರೆ ಸಾವಿರ ಪುಟಗಳಷ್ಟು ವರದಿಯನ್ನು ಕೊಟ್ಟಿರುವುದು ನಾನು ತಿಳಿದುಕೊಂಡ ಹಾಗೆ ಇದೆ ಇಷ್ಟು ಕಡಿಮೆ ಅವಧಿಯಲ್ಲಿ ವರದಿಯನ್ನು ಕೊಟ್ಟಿರುವ ಮೊದಲ ಸಂಗತಿಯಾಗಿದೆ. ಆ ವರದಿ ಬಂದ ತಕ್ಷಣ ಯಾವ ಅಧಿಕಾರಿಯನ್ನು ಅಮಾನತ್ತಿನಲ್ಲಿಡಬೇಕಾಗಿತ್ತೋ ಆ ಕೆಲಸವನ್ನು ನಾವು ಮಾಡಿದ್ದೇವೆ. ನಾವು ಭೈರೇಗೌಡರ ಸಲಹೆಗೆ ಸ್ಪಂದಿಸುತ್ತೇವೆ. ಅವರು ಸಲಹೆ ಮಾಡಿರುವ ಮೊದಲನೇ ಅಧಿಕಾರಿಣಿಯ ಮೇಲೆ ಕ್ರಿಮಿನಲ್ ಪ್ರಾಸಿಕ್ಯೂಶನ್ ಮಾಡುವುದಕ್ಕೆ ಸಂಬಂಧಪಟ್ಟಂತೆ ಈಗಾಗಲೇ ನಾವು ಕಾನೂನು ಇಲಾಖೆ ಜೊತೆ ಚರ್ಚೆಯನ್ನು ಮಾಡುತ್ತಿದ್ದೇವೆ.

ಶ್ರೀ ಸಿ.ಭೈರೇಗೌಡ: ನೀವು ರಸ್ತೆಯಲ್ಲಿ ಹೋಗುವಾಗ ಯಾರೋ ಒಬ್ಬ ಬಂದು ಕಪಾಳಕ್ಕೆ ಹೊಡೆಯುತ್ತಾನೆ. ಆಗ ನೀವು ಲಾಯರ್ ಹತ್ತಿರ ಹೋಗಿ ಕಂಪ್ಲೆಂಟ್ ಬರೆಸುತ್ತೀರಾ? ನೀವು ತಕ್ಷಣ ಪೋಲೀಸ್ ಠಾಣೆಗೆ ಹೋಗಿ ಆತನ ಮೇಲೆ ಕಂಪ್ಲೆಂಟ್ ಕೊಡುತ್ತೀರಿ. ಅದೇ ರೀತಿಯ ಕೇಸ್ ಇದೂ ಕೂಡ ಆಗಿದೆ. ಇದಕ್ಕೂ ನೀವು ತಕ್ಷಣ ಕ್ರಮ ತೆಗೆದುಕೊಳ್ಳಬೇಕು. ಅದನ್ನು ಬಿಟ್ಟು ನೀವು ಈಗ ಏನು ಮಾಡುತ್ತಿದ್ದೀರಿ ಅದು ಕಾಲಹರಣದ ಕ್ರಮವಾಗಿದೆ. ಆದರೆ, ಕಾಲಹರಣ ಮಾಡುವುದಕ್ಕೆ ಅವಕಾಶವಿಲ್ಲ. ಎಲ್ಲೆಲ್ಲಿ ಹಣ ದುರುಪಯೋಗವಾಗಿದೆ ಅಲ್ಲೆಲ್ಲಾ ಅಧಿಕಾರಿಗಳ ಮೇಲೆ ಕ್ರಿಮಿನಲ್ ಕೇಸ್ ಹಾಕುತ್ತೇವೆಂದು ಮಂತ್ರಿಗಳಾದ ತಾವು ದಯವಿಟ್ಟು ಸದನದಲ್ಲಿ ಹೇಳಬೇಕು.

ಶ್ರೀ ಹೆಚ್.ಕೆ.ಪಾಟೀಲ್: ಸನ್ಮಾನ್ಯ ಭೈರೇಗೌಡರು ಬಹಳಷ್ಟು ಕಾಲ ಸಚಿವರಾಗಿ ಸೇವೆ ಸಲ್ಲಿಸಿದ ಅನುಭವವನ್ನು ಹೊಂದಿದವರಾಗಿದ್ದಾರೆ.

ಶ್ರೀ ಸಿ.ಭೈರೇಗೌಡ: ಆ ಅನುಭವದಿಂದಲೇ ನೀವೇನು ಕ್ರಮ ತೆಗೆದುಕೊಳ್ಳಬೇಕು ಎಂಬ ಸಲಹೆಯನ್ನು ಕೊಡುತ್ತಿರುವುದು.

ಶ್ರೀ ಹೆಚ್.ಕೆ.ಪಾಟೀಲ್: ನಿಮ್ಮ ಅನುಭವದಿಂದಲೇ ನಾವು ಪಾಠವನ್ನು ಕಲಿತು ಕೊಳ್ಳಬೇಕಾಗಿದೆ. ಅದನ್ನು ನಾನು ಇಲ್ಲವೆಂದು ಹೇಳುವುದಿಲ್ಲ. ತಮಗೆ ಒಂದು ವಿಚಾರವನ್ನು ಸ್ಪಷ್ಟಪಡಿಸುತ್ತಿದ್ದೇನೆ. ಈ ಒಂದು ಕೆಲಸಗಳಲ್ಲಿ ಮಿಸ್-ಅಪ್ರೊಪ್ರಿಯೇಶನ್ ಇದ್ದರೆ ನಾವು ತಕ್ಷಣ ಕಂಪ್ಲೆಂಟ್ ಫೈಲ್ ಮಾಡುತ್ತೇನೆ. ಆದರೆ, ಈ ಇಂಜಿನಿಯರ್ಸ್ ಕೆಲಸದೊಳಗೆ ಅವರು ತಮ್ಮ ಅಧಿಕಾರ ವ್ಯಾಪ್ತಿ ಬಿಟ್ಟು ಏನು ಕೆಲಸ ಮಾಡುತ್ತಾರೆ, ತಮಗೆ ಇರತಕ್ಕಂಥ ಅಥಾರಿಟಿ ಬಿಟ್ಟು ಅವರು ಏನು

ಅಧಿಕಾರವನ್ನು ಮಿಸ್-ಯೂಸ್ ಮಾಡುತ್ತಾರೆ. that becomes misconduct. When it becomes misconduct, it is very difficult for us to file a criminal complaint. For that reason we are interacting with the Law Department to facilitate filing a criminal prosecution. ಇನ್ನು ಎರಡನೆಯದಾಗಿ ಒಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ ನಾವು 285ನೇ ನಿಯಮದ ಕೆಳಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಇಂಥ ಪ್ರಕರಣಗಳಲ್ಲಿ ನಾವು ವಿಚಾರವನ್ನು ಮಾಡುತ್ತಿದ್ದೇವೆ. ಯಾವ ಕ್ರಮವನ್ನೂ ಕೂಡ ಬಿಡುವುದಿಲ್ಲ. ಎಲ್ಲಿ ಭ್ರಷ್ಟಾಚಾರದಲ್ಲಿ ಸಿಕ್ಕಿಹಾಕಿಕೊಂಡಿರತಕ್ಕಂಥ ಅಧಿಕಾರಿಗಳಿರುತ್ತಾರೋ ಅವರ ಮೇಲೆ ಕ್ರಿಮಿನಲ್ ಪ್ರಾಸಿಕ್ಯೂಶನ್‌ನ್ನು ನಾವು ತಕ್ಷಣ ಹೂಡುತ್ತೇವೆ.

ರಾಜ್ಯದಲ್ಲಿ ಐ.ಎ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿಗಳ ವಿದೇಶಿ ಪ್ರವಾಸದಿಂದಾದ ಖರ್ಚಿನ ವಿವರ

25 (410)

ಶ್ರೀ ಯು.ಆರ್.ಸಭಾಪತಿ (ಉಡುಪಿ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದ ವಿವಿಧ ಹುದ್ದೆಗಳಲ್ಲಿರುವ ಐಎಎಸ್ ಹಾಗೂ ಐಪಿಎಸ್ ಅಧಿಕಾರಿಗಳು 1999-2000 ಸಾಲಿನಲ್ಲಿ ನಡಸಿದ ವಿದೇಶ ಪ್ರಯಾಣದ ವಿವರಗಳನ್ನು ತಿಳಿಸುವಿರಾ.

ಆ. ಈ ವಿದೇಶ ಪ್ರಯಾಣಕ್ಕೆ ರಾಜ್ಯ ಸರ್ಕಾರದಿಂದ ಖರ್ಚಾದ ಹಣವೆಷ್ಟು (ವಿವರಗಳನ್ನು ನೀಡುವುದು)

ಶ್ರೀ ಎಸ್.ಎಂ.ಕೃಷ್ಣ (ಮುಖ್ಯ ಮಂತ್ರಿಗಳು):

ಅ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.